ಹೇಳಿದೆ, 'ಸಾರ್, ಚಿಕ್ಕ ವಯಸ್ಸಿಗೆ ನಾನು ಅಕಾಡೆಮಿ ಅಧ್ಯಕ್ಷನಾಗಿರುವೆ. ನೀವೇ ಮಾಡಿದ್ದೀರಿ. ನನಗೆ ಎಂ.ಎಲ್.ಸಿ. ಆಗಿರೋದಕ್ಕಿಂತ ಅಕಾಡೆಮಿ ಅಧ್ಯಕ್ಷನಾಗಿ ಉತ್ತಮ ಕೆಲಸ ಮಾಡೋದು ಇಷ್ಟ' ಎಂದು ಸ್ಪಷ್ಟವಾಗಿ ಹೇಳಿದೆ. ಅವರು ಒತ್ತಾಯಿಸಿ ಕೊನೆಗೆ ರೋಸಿ ಹೇಳಿದರು, 'ನೀವು ಒಪ್ಪದೇ ಇದ್ದರೆ ಯಾವ ಸಾಹಿತಿಯನ್ನೂ ಎಂ.ಎಲ್.ಸಿ. ಮಾಡೊಲ್ಲ. ಯಾರಾದ್ರೂ ನನ್ನ ಶಿಷ್ಯನ್ನ ಸಮಾಜ ಸೇವೆ ವಿಭಾಗದಿಂದ ಮಾಡ್ತೀನಿ' ಎಂದರು. ಮತ್ತೆ ಹಾಗೆ ಮಾಡಿದರು ಕೂಡ. ನಾನು ವಾಪಸು ಬರುವಾಗ ಒಂದು ಮಾತು ಹೇಳಿದರು, 'ನಿಮ್ಮಂಥ ಹಿಂದುಳಿದೋರು ನಿಮ್ಮನ್ನು ನೀವು ಸುಟ್ಟುಕೊಂಡು ಸಂತೋಷ ಪಡ್ತೀರಿ, ಹೋಗಿ ಬರಗೂರ್'. ಬಂಗಾರಪ್ಪನವರ ಈ ಮಾತು ಇವತ್ತು ನನ್ನನ್ನು ಕಾಡುವ ಒಂದು ರೂಪಕವಾಗಿದೆ.

ಮುಂದೆ ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ಅವಧಿ ಮುಗಿಸಿದಾಗ ಮತ್ತೊಂದು ಅವಧಿಗೆ ಮುಂದುವರೆಸಲು ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಚ್ಛೆಸಿದ್ದರು. ಕೆಲವರ ಮೂಲಕ ಹೇಳಿಸಿದ್ದರು. ಹಿರಿಯ ಸಾಹಿತಿ ಗುರುಲಿಂಗ ಕಾಪಸೆಯವರೂ ಈ ಕುರಿತು ಒತ್ತಾಯ ಮಾಡಿದ್ದರು. ನಾನು 'ಸಾಹಿತಿಗಳಾದ ನಾವು ಮತ್ತೆ ಮತ್ತೆ ಇಂಥ ಸ್ಥಾನಗಳಿಗೆ ಅಂಟಿಕೊಳ್ಳಬಾರದು. ಎರಡನೇ ಅವಧಿ ನನಗೆ ಬೇಡ' ಎಂದು ನಿರಾಕರಿಸಿದೆ. ಅದೇ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ. ಜಿ. ಪರಮೇಶ್ವರ ಅವರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗುವಂತೆ ಒತ್ತಾಯಿಸಿದರು. ಇವರ ಅವಧಿ ಮುಗಿದು ಧರ್ಮಸಿಂಗ್ ಅವರು ಮುಖ್ಯಮಂತ್ರಿಯಾದರು. ಅವರು ಕೂಡ ಕುಲಪತಿಯಾಗಲು ಹೇಳಿದರು. ನಾನು ಮತ್ತೆ ಮತ್ತೆ ಇಂಥ ಸ್ಥಾನಗಳ ಹಿಂದೆ ಹೋಗುವುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೆ. 'ಮೇಷ್ಟ್ರು' ಕೆಲಸದಲ್ಲಿ ಮುಂದುವರೆದಿದ್ದೆ. ಮುಂದೊಮ್ಮೆ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಸ್ವಯಂ ನಿವೃತ್ತಿ ಪಡೆದೆ. ಕೆಲವರು ಭಾವಿಸಿದಂತೆ ಸಿನಿಮಾ ನಿರ್ದೇಶನಕ್ಕಾಗಿ ಸ್ವಯಂ ನಿವೃತ್ತಿ ಪಡೆಯಲಿಲ್ಲ. ಆಗ ಯುಜಿಸಿ ಸಂಬಳ ಸಹ ಇರಲಿಲ್ಲ. ಇಷ್ಟು ನಿಮ್ಮ ಮಾಹಿತಿಗಾಗಿ ಹೇಳಿದೆ; ಹೆಚ್ಚುಗಾರಿಕೆಗಾಗಿ ಅಲ್ಲ.

ಮುಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಎಂ.ಎಲ್.ಸಿ. ಸ್ಥಾನಕ್ಕೆ ನನ್ನ ಹೆಸರು ಕೇಳಿಬರುತ್ತಲೇ ಇತ್ತು. ಸುದ್ದಿ ಆಗುತ್ತಲೇ ಇತ್ತು. ಆಗ ನನ್ನ ಪತ್ನಿ ರಾಜಲಕ್ಷ್ಮಿ ಹೇಳಿದ್ದಳು, 'ಎಂ.ಎಲ್.ಸಿ. ಸೀಟು ಖಾಲಿ ಆದಾಗ ಮೊದಲು ಕೇಳಿ ಬರೋ ಹೆಸರೂ ನಿಮ್ಮದೇ. ಮೊದಲು ಬಿಟ್ಟು ಹೋಗೊ ಹೆಸರೂ ನಿಮ್ಮದೇ'. ನಿಜ. ಆದರೆ, ಆ ಬಗ್ಗೆ ನನಗೆ ಕಿಂಚಿತ್ತೂ ನಿರಾಶೆಯಿಲ್ಲ. ನನಗೆ ಮಾಡಲು ಬೇಕಾದಷ್ಟು ಕೆಲಸಗಳಿವೆ.

◆ **ಕಾಂಗ್ರೆಸ್ ಪಕ್ಷದ ಕೆಲ ಹೋರಾಟಗಳಿಗೆ ನೀವು ನೈತಿಕ ಬೆಂಬಲ ಕೊಟ್ಟಿರಿ. ಭಾರತದಂಥ ದೇಶದಲ್ಲಿ ಸಾರ್ವಜನಿಕ ಬುದ್ಧಿಜೀವಿ ಯಾವುದಾದರೂ ರಾಜಕೀಯ ಪಕ್ಷದೊಂದಿಗೆ ಪ್ರತ್ಯಕ್ಷವಾಗಿಯೊ ಅಥವಾ ಪರೋಕ್ಷವಾಗಿಯೊ ಗುರುತಿಸಿಕೊಂಡರೆ ಅವನ/ಳ ವಿಶ್ವಾಸಾರ್ಹತೆ ಪ್ರಶ್ನಾರ್ಹವಾಗುವುದಿಲ್ಲವೆ? ಬುದ್ಧಿಜೀವಿಯ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗೆ ಒಂದು ಪ್ರಮಾಣದ ಧಕ್ಕೆಯಾಗುವುದಿಲ್ಲವೆ?**

ನಿಜ; ಹಿಂದೊಮ್ಮೆ ಕಾಂಗ್ರೆಸ್ ಪಕ್ಷದ ಒಂದೆರಡು ಹೋರಾಟಗಳಿಗೆ ನಾನು ನೈತಿಕ ಬೆಂಬಲ ಕೊಟ್ಟಿದ್ದೆ. ಮುಖ್ಯವಾಗಿ ಗಣಿಗಾರಿಕೆ ವಿರುದ್ಧದ ಪಾದಯಾತ್ರೆಯನ್ನು ಬಹಿರಂಗವಾಗಿಯೇ ಬೆಂಬಲಿಸಿದ್ದೆ. ಅದು ವಿಷಯಾಧಾರಿತ ಬೆಂಬಲ. ಇದೇ ಪಾದಯಾತ್ರೆಯಲ್ಲಿ ನಡುವೆ ಬೇರೆ ಪಕ್ಷದ ಕೆಲವರ ಬಗ್ಗೆ ಕಾಂಗ್ರೆಸ್ ನೇತಾರರು ಏಕವಚನ ಪ್ರಯೋಗ ಮಾಡಿ ಬಯ್ಗುಳಿಗೆ ಬಾಯಾದಾಗ ಅದನ್ನು ಕೂಡಲೇ ವಿರೋಧಿಸಿ 'ಪ್ರಜಾವಾಣಿ'ಗೆ ಬರೆದೆ. ಪಾದಯಾತ್ರೆ ಮಾಡುವವರ ಭಾಷೆಯ ಬಳಕೆ ಕೂಡ ಸರಿಯಾಗಿರಬೇಕೆಂದು